INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -2, March--April, 2025,
PageNo,09- 23
Peer -Reviewed, Refereed Journal

# ಉತ್ತರ ಕರ್ನಾಟಕ ರಂಗಭೂಮಿ ಚರಿತ್ರೆ – ಒಂದು ಚರ್ಚೆ

ಡಾ.ಎಂ.ಚಂದ್ರಪ್ಪ.[1]

ಆದಿವಾಸಿ ಅಥವಾ ಮೂಲ ನಿವಾಸಿಗಳು ಕೃಷಿ, ಮಳೆ ಮತ್ತು ಪ್ರಕೃತಿ ದೇವತೆಗಳನ್ನು ಒಲಿಸಿಕೊಳ್ಳಲು ನೃತ್ಯ ಪ್ರದರ್ಶಿಸುತ್ತಿದ್ದರು. ಹಾಗೂ ಮುಖವಾಡಗಳನ್ನು ಧರಿಸಿಕೊಂಡು ದೇಶದ ಎಲ್ಲಾ ಕಡೆಗಳಲ್ಲಿ ನೃತ್ಯ ಪ್ರದರ್ಶನ ನೀಡುತ್ತಿದ್ದರೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.ರಂಗಭೂಮಿಯು ಜಗತ್ತಿನ ಎಲ್ಲೆಡೆ ವಿಶಿಷ್ಠ ರೀತಿಯಲ್ಲಿ ಬೆಳೆದು ಬಂದಿದೆ. ರಂಗಭೂಮಿ ಉದಯವಾಗುವುದಕ್ಕೂ ಮೊದಲು ಆದಿ ಮಾನವರು ಸಂಜ್ಞೆಗಳು ಮತ್ತು ಚಿತ್ರಗಳ ಮೂಲಕ ಆಂಗಿಕಾಭಿನಯವನ್ನು ನಿತ್ಯದ ಸಂವಹನ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದರು ಎಂದು ಇತಿಹಾಸಕಾರರು ತಿಳಿಸಿದ್ದಾರೆ.

ರಂಗಭೂಮಿ – ನಾಟಕ ಕಲಾ ಮಾಧ್ಯಮವಾಗಿ ಸಾವಿರಾರು ವರ್ಷಗಳಿಂದಲೂ ಸಾರ್ವಜನಿಕರಿಗೆ ಅನೌಪಚಾರಿಕ ಮಾಹಿತಿ, ಶಿಕ್ಷಣ, ಮನರಂಜನೆ, ಮಾರ್ಗದರ್ಶನ, ಮನವೊಲಿಕೆ ಮತ್ತು ನೀತಿ ಬೋಧನೆ ಕೆಲಸವನ್ನು ಮಾಡುತ್ತಾ ಬೆಳೆದಿದೆ. ರಂಗಭೂಮಿ ಸಮೂಹ ಮಾಧ್ಯಮವು ವಿಶಿಷ್ಟ ಇತಿಹಾಸ, ಪರಂಪರೆ, ಪರಿಭಾಷೆ ಮತ್ತು ಮಹತ್ವಗಳನ್ನು ಹೊಂದಿದೆ. ಈ ಮಾಧ್ಯಮವು ಜಗತ್ತಿನೆಲ್ಲೆಡೆ ಭಾಷಾತೀತವಾದ, ಪ್ರದೇಶಾತೀತವಾದ, ಧರ್ಮಾತೀತವಾದ, ವರ್ಗಾತೀತವಾದ ಮತ್ತು ಜಾತ್ಯಾತೀತವಾದ ಸಮೂಹ ಸಂಪರ್ಕ ಮಾಧ್ಯಮವಾಗಿದೆ. ರಂಗಭೂಮಿ ಮಾಧ್ಯಮವು ಸಾಹಿತ್ಯ, ಸಂಗೀತ, ನೃತ್ಯ, ಅಭಿನಯ, ಅಲಂಕಾರ, ಪ್ರಸಾಧನ, ಪಕ್ಕವಾದ್ಯ, ನಿರ್ದೇಶನ, ದೃಶ್ಯಾವಳಿ, ಸೃಜನಶೀಲತೆ ಇವೇ ಮೊದಲಾದ ವಿಶಿಷ್ಟ ಅಂಶಗಳನ್ನು ಒಳಗೊಂಡಿರುವ ಪರಿಣಾಮಕಾರಿ ಪ್ರದರ್ಶನಕಲೆಯಾಗಿ ವಿವಿಧ ಕಾಲಘಟ್ಟಗಳಲ್ಲಿ ಬೆಳೆದಿದೆ. ರಂಗಭೂಮಿ ಸಮೂಹ ಮಾಧ್ಯಮವು ಬಹುಮುಖ್ಯವಾಗಿ ಸಮೂಹ ಕೇಂದ್ರಿತ ಮಾಧ್ಯಮವಾಗಿದೆ. ರಂಗಭೂಮಿ ಸಮೂಹ ಮಾಧ್ಯಮವು ಪ್ರೇಕ್ಷಕರಲ್ಲಿ ವೈವಿಧ್ಯಮಯ ಪ್ರತಿಕ್ರಿಯೆಯನ್ನು ಸೃಷ್ಟಿಸುವಂತಹ ಒಕ್ಕೂಟ ಕಲೆಯಾಗಿ ಜಗತ್ತಿನ ಎಲ್ಲೆಡೆ ಬೆಳೆದಿದೆ.

---

[1].ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ,ಮೈಸೂರು.

ರಂಗಭೂಮಿ ಒಂದು ಪ್ರದರ್ಶನ ಕಲಾ ಪ್ರಕಾರವಾಗಿದೆ. ಕಳೆದ 500 ವರ್ಷಗಳಲ್ಲಿ ರಂಗಭೂಮಿಯು ತನ್ನ ಬೆಳವಣಿಗೆಯನ್ನು ಹಂತ ಹಂತವಾಗಿ ಕಂಡುಕೊಂಡಿದೆ. ರಂಗಭೂಮಿಯ ಇತಿಹಾಸವು ಕ್ರಿ.ಪೂ. 5ನೇ ಶತಮಾನದಲ್ಲಿ ಅಥೆನ್ಸ್‌ನಿಂದ ಪ್ರಪಂಚದಾದ್ಯಂತದ ಭಿನ್ನ ರೀತಿಯ ಸಂಸ್ಕೃತಿ, ಸಂಪ್ರದಾಯಗಳ ಮೂಲಕ ರಂಗಭೂಮಿಯು ಹರಡುಕೊಂಡಿದೆ. ಕ್ರಿ.ಪೂ. ಆರನೇ ಶತಮಾನದಲ್ಲಿ ಮೊಟ್ಟ ಮೊದಲ ಬಾರಿಗೆ ಗ್ರೀಕ್ ರಂಗಭೂಮಿ ಉಗಮವಾಯಿತು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅರಿಸ್ಟಾಟಲ್‌ನ ಕಾವ್ಯಶಾಸ್ತ್ರದೊಂದಿಗೆ ಬಹುತೇಕ ಎಲ್ಲಾ ದೇಶಗಳು ಸೇರಿ ಭಾರತೀಯ ರಂಗಭೂಮಿ ಒಳಗೊಂಡಂತೆ ಇಲ್ಲಿಯವರೆಗೂ ವಿವಿಧ ರಂಗ ಶೈಲಿಗಳಿಗೆ ಅಡಿಪಾಯ ಹಾಕಿಕೊಟ್ಟಿದೆ.

ಭಾರತದ ರಂಗಭೂಮಿಯ ಮೇಲೆ ಪಾಶ್ಚಾತ್ಯ ರಂಗಭೂಮಿಯ ಪ್ರಭಾವ ಉಂಟಾಗುತ್ತದೆ. ಆದ್ದರಿಂದ ಮೇಲೆ ಸ್ಥಳೀಯ ರಂಗಭೂಮಿಯಲ್ಲು ಸಾಕಷ್ಟು ಬದಲಾವಣೆಗಳು ಆಗುತ್ತಿವೆ. ಹಿಂದಿನ ಕಾಲದಲ್ಲಿ ನಾಟಕ ಎಂದರೆ ಸಹಜವಾಗಿ ಅಭಿನಯಿಸುವುದು ಎಂದು ತಿಳಿಯಲಾಗಿತ್ತು. ಗ್ರೀಕ್ ನಾಟಕಗಳ ಪ್ರಭಾವ ನಮ್ಮ ರಂಗಭೂಮಿಗೆ ಆದ ಮೇಲೆ ನಾಟಕ ಎನ್ನುವುದು ಸಹಜತೆ ಅಲ್ಲ, ಅದನ್ನು ನಾಟಕವಾಗೇ ಪ್ರದರ್ಶಿಸಬೇಕು. ಪ್ರೇಕ್ಷಕರು ಅದನ್ನು ನಾಟಕವಾಗೇ ನೋಡಬೇಕು ಎಂಬ ಪರಿಕಲ್ಪನೆ ಬೆಳೆಯಿತು. ನಮ್ಮಲ್ಲಿ ಹಲವಾರು ರಂಗ ಸಂಸ್ಥೆಗಳಿದ್ದು ಹೊಸ ಅಲೆಯ ನಾಟಕ ಪ್ರದರ್ಶಿಸುತ್ತಿರುವುದು ಉತ್ತಮ ಬೆಳವಣಿಗೆಯಾಯಿತು.

ನಾಗರಿಕತೆ ಬಾಹ್ಯ ಸಂಪತ್ತನ್ನೂ, ಸಂಸ್ಕೃತಿ ಆಂತರಿಕ ಸಂಪತ್ತನ್ನೂ ಪ್ರತಿಬಿಂಬಿಸುತ್ತದೆ. ಆದರೆ ಇಂದು ಬಾಹ್ಯ ಪ್ರಪಂಚ ವಿಜೃಂಭಿಸಿ ಆಂತರಿಕ ಸಂಪತ್ತು ಅಡಗುವಂತಾಗಿದೆ. ರಂಗಪ್ರಕ್ರಿಯೆ ಸಮಾಜವನ್ನು ಒಟ್ಟುಗೂಡಿಸುವ ಕೆಲಸ ಮಾಡುತ್ತಿದ್ದು ಕಲೆ–ಸಾಹಿತ್ಯ–ರಂಗಕ್ರಿಯೆಗೆ ಪರಿಶ್ರಮ ಅಗತ್ಯವಾಗಿದೆ. ಜಾನಪದ ರಂಗಭೂಮಿ ಭರತ ಖಂಡದ ಸಂಸ್ಕೃತಿ ಮತ್ತು ನಾಗರೀಕತೆಗಳೊಂದಿಗೆ ಬೆಳೆದಿದೆ. ಜಾನಪದ ರಂಗಕಲೆಗಳೆಲ್ಲವೂ ಜಾನಪದ ರಂಗಭೂಮಿಯ ಪ್ರಾಚೀನ ಸ್ವರೂಪವನ್ನು ತಿಳಿಸುತ್ತವೆ.

ಭಾರತೀಯ ರಂಗಭೂಮಿ ಎಂದಾಗ ಪ್ರಾಚೀನ ಕಾಲದ ಸಂಸ್ಕೃತ ನಾಟಕಗಳು ಅಥವಾ ಆಧುನಿಕ ಕಾಲದ ಯಾವುದೇ ಒಂದು ಭಾಷೆಯ ರಂಗಭೂಮಿ ಪ್ರಕಾರಕ್ಕೆ ಸೀಮಿತಗೊಂಡಿಲ್ಲ. ಅದು ಶಿಷ್ಟ ಮತ್ತು ಜಾನಪದ ಎಂಬ ಎರಡು ರಂಗಭೂಮಿಗಳಲ್ಲಿಯೂ ವ್ಯಕ್ತಗೊಂಡಿದೆ.

ಸಂಸ್ಕೃತ ನಾಟಕಗಳು ಬಂದ ಮೇಲೂ ಜಾನಪದ ರಂಗಭೂಮಿ ಸ್ಥಳೀಯರ ಸಹಭಾಗಿತ್ವ ಮತ್ತು ಪ್ರೋತ್ಸಾಹಗಳಿಂದಾಗಿ ಪರಿಷ್ಕಾರಗೊಂಡು ಶಿಷ್ಟ ರಂಗಭೂಮಿಯಾದಾಗಲೂ ಜಾನಪದೀಯ ಪರಂಪರೆ ಭಾರತೀಯ ರಂಗಭೂಮಿಯಲ್ಲಿ ಉಳಿದುಕೊಂಡಿದೆ. ಭಾರತೀಯ ರಂಗಭೂಮಿಯ ಇತಿಹಾಸವು ಎರಡು ಸಾವಿರದ ಐದು ನೂರು ವರ್ಷ ಕಳೆದಿದೆ. ಪ್ರಾಚೀನ ಭಾರತದಲ್ಲಿ ಭರತನ ನಾಟ್ಯಶಾಸ್ತ್ರವು ರಂಗಭೂಮಿಗೆ ಸಮಗ್ರ ಮಾರ್ಗದರ್ಶಿಯಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರಂಗಭೂಮಿಯ ಇತಿಹಾಸ, ಪರಂಪರೆ ಅಥವಾ ಜಾನಪದ ರಂಗಭೂಮಿ ಯಾವ ಕಾಲಕ್ಕೂ ಇದ್ದಿರಬಹುದಾದರೂ ಅದಕ್ಕೆ ಅಧಿಕೃತ ದಾಖಲೆಗಳಿಲ್ಲ. ವಿದ್ವಾಂಸರ ಪ್ರಕಾರ ಕಲಬುರಗಿ ಜಿಲ್ಲೆ ಸೇಡಂ ತಾಲೂಕಿನ ಮಳಖೇಡದಲ್ಲಿ ರಾಷ್ಟ್ರಕೂಟರ ನೃಪತುಂಗನ ಆಸ್ಥಾನದಲಿದ್ದ 'ಶ್ರೀವಿಜಯ' ಕವಿ ರಚಿಸಿದ 'ಕವಿರಾಜ ಮಾರ್ಗ' ಕೃತಿಯಲ್ಲಿ 'ಪಗರಣ'ದಂತಹ ಶಬ್ದಗಳು ನಾಟಕದ ಬಗೆ ಕುರಿತದ್ದಾಗಿರಬಹುದೆಂಬ ಅಭಿಪ್ರಾಯವಿದೆ.

ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ ರಂಗಭೂಮಿ ಪ್ರಕಾರವಾಗಿ ಜಾನಪದ ರಂಗಭೂಮಿ ಬೆಳೆದಿದೆ. ಕನ್ನಡ ರಂಗಭೂಮಿಯ ಪ್ರಕಾರಗಳಲ್ಲಿ ಗೊಂಬೆಯಾಟ, ತೊಗಲು ಗೊಂಬೆಯಾಟ, ಬಯಲಾಟ ದಶಾವತಾರ ಎಂದು ಕರೆಯುವ ಯಕ್ಷಗಾನದ ಆಟಗಳು (ಅದರ ತೆಂಕು, ಬಡಗು ಎಂಬ ಪ್ರಭೇದ), ದೊಡ್ಡಾಟ (ಮೂಡಲಪಾಯ ಎನ್ನುವುದು ಅಧ್ಯಯನಕ್ಕೆ ಇಟ್ಟ ಹೆಸರು), ಘಟ್ಟದಕೋರೆ, ಶನಿಕಥೆ ಆಟ, ಕೃಷ್ಣಪಾರಿಜಾತ ಎನ್ನುವ ದೊಡ್ಡಾಟದ ಪ್ರಕಾರಗಳು ಮತ್ತು ನಾಟಕಗಳು ಪ್ರಮುಖವಾಗಿವೆ. ಕನ್ನಡ ನಾಟಕಗಳಲ್ಲಿ ತುಂಬ ಹಳೆಯದು ಚಿಕ್ಕದೇವರಾಜರ ಆಸ್ಥಾನದಲ್ಲಿದ್ದ ಸಿಂಗರಾರ್ಯ ರಚಿಸಿದ 'ಮಿತ್ರಾವಿಂದಾ ಗೋವಿಂದ'. ಇದು 17ನೆಯ ಶತಮಾನದ ಅಂತ್ಯಭಾಗದಲ್ಲಿ ರಚಿತವಾದ ಕೃತಿ; ಶ್ರೀಹರ್ಷನ ರತ್ನಾವಳೀ ನಾಟಕದ ಕನ್ನಡ ರೂಪವಾಗಿದೆ.

ಶಾಂತ ಕವಿಗಳೆಂದು ಹೆಸರಾದ ಸಕ್ಕರಿ ಬಾಳಾಚಾರ್ಯರು ಮರಾಠಿ ನಾಟಕಕ್ಕೆ ಪ್ರತಿಯಾಗಿ ಕನ್ನಡ ನಾಟಕಗಳನ್ನು ರಚಿಸುವಲ್ಲಿ ಕಾರಣರಾದರು. ಸಮಗ್ರ ಕರ್ನಾಟಕ ವೃತ್ತಿ ರಂಗಭೂಮಿ ಇತಿಹಾಸದಲ್ಲಿ ಗದಗ ಜಿಲ್ಲೆಗೆ ಪ್ರಥಮ ಕೀರ್ತಿ ಸಲ್ಲುವಂತಾಯಿತು. ಕನ್ನಡ ನಾಡಿನ ಜಾನಪದ ರಂಗಭೂಮಿಯ ಹುಟ್ಟು ದೇವಪೂಜೆಯ ಮೂಲ ಮನೋಭಾವದಲ್ಲಿ ಅಡಗಿದೆ ಎಂದು ಹೆಚ್.ಕೆ. ರಂಗನಾಥ್ ಅಭಿಪ್ರಾಯಪಡುತ್ತಾರೆ. ರಂಗಭೂಮಿ ಪ್ರದರ್ಶನ ನೀಡುವ ಸಲುವಾಗಿ ಒಟ್ಟಾರೆ ಸೇರಿ ಕೆಲಸ ನಿರ್ವಹಿಸುವ ಸಮಾನ ಮನಸ್ಕರ ಒಂದು ಸಮೂಹವನ್ನು 'ಹವ್ಯಾಸಿಗಳು' ಎಂದು ಸಾಮಾನ್ಯ ಅರ್ಥದಲ್ಲಿ ಬಣ್ಣಿಸಲಾಗಿದೆ. 'ಆಧುನಿಕ ಕನ್ನಡ ನಾಟಕ' ಅಥವಾ 'ಕನ್ನಡ ಹವ್ಯಾಸಿ ರಂಗಭೂಮಿ' ನಾಡಿನಲ್ಲಿ ಜನ್ಮ ತಾಳಿತು. ರಂಗಭೂಮಿಯನ್ನು ಬದುಕಿನ ವಾಸ್ತವಿಕತೆಗಳನ್ನು ಅಭಿವ್ಯಕ್ತಗೊಳಿಸುವ ಪ್ರಭಾವಶಾಲಿ ಸಮೂಹ ಮಾಧ್ಯಮವನ್ನಾಗಿ ಬೆಳೆಸುವ ನಿಟ್ಟಿನಲ್ಲಿ ಕನ್ನಡ ಹವ್ಯಾಸಿ ರಂಗಭೂಮಿ ತನ್ನದೇ ಆದ ಪ್ರಸ್ತುತತೆ ಹೊಂದಿದೆ.

ಕನ್ನಡ ರಂಗಭೂಮಿ ಅನೇಕ ಘಟ್ಟ ಹಾಗೂ ಸವಾಲುಗಳನ್ನು ಎದುರಿಸಿದೆ. ಸಣ್ಣಾಟ, ದೊಡ್ಡಾಟ, ಯಕ್ಷಗಾನ ರಂಗಭೂಮಿಯನ್ನು ಕಟ್ಟಿ ಬೆಳೆಸುವಲ್ಲಿ ಸಾಕಷ್ಟು ಕೊಡುಗೆ ನೀಡಿವೆ. ಜಾನಪದ ರಂಗಭೂಮಿಯಿಂದ ಶುರುವಾದ ಕನ್ನಡ ರಂಗಭೂಮಿಯು ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯನ್ನು ದಾಟಿ ಆಧುನಿಕ ರಂಗಭೂಮಿಯಾಗಿ ಮಾರ್ಪಾಟಾಗಿದೆ. ಸಿನಿಮಾ ಕ್ಷೇತ್ರಕ್ಕೆ ರಂಗಭೂಮಿಯ ಕೊಡುಗೆ

ಅಪಾರವಾಗಿದ್ದು, ಪ್ರಮುಖ ನಟರೆಲ್ಲಾ ರಂಗಭೂಮಿ ಹಿನ್ನೆಲೆಯುಳ್ಳವರು. ಗುಬ್ಬಿ ವೀರಣ್ಣ ಕಂಪನಿ ಬಹುದೊಡ್ಡ ಕೊಡುಗೆ ನೀಡಿದೆ ಎಂದರೆ ತಪ್ಪಾಗಲಾರದು.

ಕನ್ನಡ ನಾಡಿನಲ್ಲಿ ಹೀಗೆ ಮೂಲೆ ಗುಂಪಾದ ನಟರಿಗೆ ಅದೃಷ್ಟದ ಬೆಳಕು ಬಂದುದು 19ನೆಯ ಶತಮಾನದ ಉತ್ತರಾರ್ಧದ ಸುಮಾರಿಗೆ ಮೈಸೂರರಸರಾಗಿದ್ದ ಮುಮ್ಮುಡಿ ಕೃಷ್ಣರಾಜ ಒಡೆಯರಿಗೆ ನಾಟಕ ನೋಡುವುದೆಂದರೆ ಬಹಳ ಪ್ರಿಯ. ಒಳ್ಳೆಯ ನಟನಟಿಯರಿಗೆ ಆಹ್ವಾನವಿತ್ತು. ತಮ್ಮ ರಾಣಿವಾಸ, ಪರಿವಾರ, ಬಂಧು ಜನರು, ಪುರಜನರಲ್ಲಿ ಗಣ್ಯರು ಇವರನ್ನು ಕರೆಸಿಕೊಂಡು ಅರಮನೆಯ ಅಂಗಳದಲ್ಲಿ ಅವರೆದುರಿಗೆ ನಾಟಕವಾಡುತ್ತಿದ್ದರಂತೆ. ಆ ಜನ ಮೆಚ್ಚಿದರೆಂದರೆ ದೊರೆಗೂ ಆನಂದ, ನಟರಿಗೆ ಯೋಗ್ಯ ಪುರಸ್ಕಾರ ನೀಡಲಾಗಿದೆ.

ಕನ್ನಡ ರಂಗಭೂಮಿ ಎಷ್ಟು ಪ್ರಾಚೀನವಾದದ್ದು ಎಂಬುದಕ್ಕೆ ದಾಖಲೆಗಳ ಕೊರತೆ ಇದೆ. ಅಷ್ಟು ಪುರಾತನವಾದದ್ದಾಗಿದೆ. ಇಂಥ ಅಪೂರ್ವ ಕ್ಷೇತ್ರದ ಬಗ್ಗೆ ನಾವಿವತ್ತು ಸಂವಾದ ಮಾಡಲಿದ್ದೇವೆ. ಸಾಹಿತ್ಯ ಅಥವಾ ನಾಟಕ ಕೃತಿ ಮತ್ತು ರಂಗಭೂಮಿ ಇವೆರಡೂ ಪೂರಕವಾಗಿವೆ. ಹಾಗಾಗಿ ಉತ್ತರ ಕರ್ನಾಟಕಕ್ಕೆ ಪಾರಂಪರಿಕ ಹಿನ್ನೆಲೆಯನ್ನು ರಂಗಭೂಮಿಯಲ್ಲಿ ಕಾಣಬಹುದಾಗಿದೆ.

ಉತ್ತರ ಕರ್ನಾಟಕದಲ್ಲಿ ರಂಭೂಮಿಯ ಪ್ರಸ್ತುತ ಮತ್ತು ಅನಿವಾರ್ಯ ಎನಿಸಿದೆ. ಯಾಕೆಂದರೆ ಅನಿಷ್ಟ ಪದ್ಧತಿ ನಿರ್ಮೂಲನೆ ಮಾಡಿ ವೈಜ್ಞಾನಿಕ ಮನೋಭಾವನೆ ರೂಢಿಸಿಕೊಂಡು ಶಾಂತಿ, ನೆಮ್ಮದಿ, ಆದರ್ಶ ಬದುಕಿನ ಪಾಠವನ್ನು ಜನರಲ್ಲಿ ಬೆಳೆಸುತ್ತಿವೆ. ಇದರ ವಿರುದ್ಧ ಸಮಾಜ ಮತ್ತು ಸಮುದಾಯದ ತಪ್ಪು ಆಲೋಚನೆ ಕ್ರಮಗಳನ್ನು ತಿದ್ದುವ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿರುವ ರಂಗ ತಂಡಗಳು ಇಂದಿಗೂ ಈ ಭಾಗದ ಜನರಿಗೆ ಶಿಕ್ಷಣ, ಮಾಹಿತಿ, ಮನರಂಜನೆ ಜೊತೆಗೆ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಾ ಬೆಳೆದಿದೆ. ಆಧುನಿಕ ಮಾಧ್ಯಮಗಳು ಪ್ರಭಲ ಸ್ಪರ್ಧೆ ಎದುರಿಸಿ ರಂಗ ಮಾಧ್ಯಮದ ಅನಿವಾರ್ಯತೆಯನ್ನು ಉಳಿಸಿಕೊಂಡಿದೆ. ಭಿನ್ನ ಭಾವ ಮತ್ತು ಆಲೋಚನೆಯ ಪ್ರೇಕ್ಷಕರನ್ನು ರಂಜಿಸವ ದೊಡ್ಡ ಸವಾಲು ಈ ಭಾಗದ ರಂಗಭೂಮಿಗಿದೆ.

ಉತ್ತರ ಕರ್ನಾಟಕ ಭಾಗದ ಪ್ರಮುಖ ಜಿಲ್ಲೆಗಳಾದ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ, ಬೆಳಗಾಂ, ಹುಬ್ಬಳ್ಳಿ, ಧಾರವಾಡ, ವಿಜಯನಗರ ಇತರೆ ಜಿಲ್ಲೆಗಳಲ್ಲಿನ ಮೂಲ ಸಾಮಾಜಿಕ ಸಮಸ್ಯೆಗಳು ಮತ್ತು ಆಳುವ ವರ್ಗಗಳ ದುರಾಡಳಿತವನ್ನು ಸಮರ್ಥವಾಗಿ ಬದಲಾವಣೆ ತರುವಲ್ಲಿ ಈ ಪ್ರದೇಶದ ರಂಗಭೂಮಿ ಮತ್ತು ಕಲಾವಿದರು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಪುಷ್ಟೀಕರಿಸುತ್ತದೆ.

ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳ ರಂಗಭೂಮಿಯ ಸಂಕ್ಷಿಪ್ತ ವಿವರ

**ರಾಯಚೂರು ರಂಗಭೂಮಿ**

ನಾಟಕ ಹರಿಯುವ ನೀರಿನಂತೆ, ಆದ್ದರಿಂದ ರಂಗಭೂಮಿ ಎಲ್ಲೆಲ್ಲೂ ಹರಡಿಕೊಂಡಿದೆ. ರಾಯಚೂರು ತಾಲೂಕು, ಪಂ. ಸಿದ್ಧರಾಮ ಜಂಬಲದಿನ್ನಿ ರಂಗಮಂದಿರ, ಕಲಾವಿದರ ಪರಿಚಯ, ಪಟ್ಟದಕಲ್ ಶ್ರೀ ಬಸವೇಶ್ವರ ನಾಟಕ ವಸ್ತುಭಂಡಾರ, ಪ್ರಯೋಗಿಸಿದ ನಾಟಕಗಳ ಛಾಯಾಚಿತ್ರಗಳು, ಮಾನ್ವಿ ತಾಲೂಕು, ದಾಸರ ಬೀಡಿನಲ್ಲಿ ಎಡಬಿಡದ ನಾಟಕಗಳು, ಕಲಾವಿದರ ಪರಿಚಯ, ಪ್ರದರ್ಶನಗೊಂಡ ನಾಟಕಗಳ ಛಾಯಾಚಿತ್ರಗಳು, ಸಿಂಧನೂರು ತಾಲೂಕು ರಂಗಭೂಮಿ ಮತ್ತು ಕಲೆ ಎರಡೂ ಫಲವತ್ತಾಗಿದೆ. ಕಲಾವಿದರ ಪರಿಚಯ, ಪ್ರದರ್ಶಿಸಿದ ನಾಟಕಗಳ ಛಾಯಾಚಿತ್ರಗಳು, ಲಿಂಗಸುಗೂರು ತಾಲೂಕು, ನಾಟಕ ಪ್ರದರ್ಶನ ಖಚಿತ ಮಾಹಿತಿಯ ಕೊರತೆ ಇದೆ. ರಂಗಮಂದಿರ, ರಂಗಪರದೆ, ನಾಟಕಗಳ ಛಾಯಾಚಿತ್ರಗಳು, ದೇವದುರ್ಗ ತಾಲೂಕು ಬರದ ನಾಡಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆ, ಕಲಾವಿದರು ಇಲ್ಲಿದ್ದಾರೆ.

**ವಿಜಯನಗರ ರಂಗಭೂಮಿ**

ನೂತನವಾಗಿ ರಚನೆಯಾದ ವಿಜಯನಗರ ಜಿಲ್ಲೆಯ ರಂಗಭೂಮಿ ಬೆಳೆವಣಿಗೆಗೆ ಬಿ.ಎಂ.ಎಸ್. ಪ್ರಭು, ಶ್ರೀಮತಿ ನಾಗರತ್ನಮ್ಮ, ಪ್ರಶಾಂತ್, ಮರಿಯಮ್ಮನಹಳ್ಳಿ ನಾಗರತ್ನಮ್ಮ, ಹನುಮಕ್ಕ, ಚಿದಾನಂದ, ಚಮನ್ ಸಾಬ್, ಪಿ. ಅಬ್ದುಲ್ಲ, ಮಲ್ಲಪ್ಪ, ಹುಲಿಗೆಪ್ಪ ಎಸ್. ಎಂ. ಬಡಿಗೇರ್, ಹುಲಿಗಪ್ಪ ಕಟ್ಟಿಮನಿ, ಇಸ್ಮಾಯಿಲ್ ಎಲಿಗಾರ ಹರಪ್ಪನಹಳ್ಳಿ, ಕೂಗ್ಲಿ ಕೆಂಪಯ್ಯ, ಪಂಪಣದಣ ಹಗರಿಬೊಮ್ಮನಹಳ್ಳಿ ಸೇರಿದಂತೆ ಹಲವಾರು ರಂಗಕರ್ಮಿಗಳು ಹಾಗೂ ಕಲಾವಿದರು ರಂಗ ಸಂಸ್ಕೃತಿ ಕಲಾತಂಡ, ಲಲಿತಕಲಾ ರಂಗ, ಜನನಿ ಪುಷ್ಪ ಕಲಾತಂಡ, ಹೊಸಪೇಟೆ ಭಾವೈಕ್ಯತೆ ವೇದಿಕೆ ಇನ್ನು ಹಲವಾರು ರಂಗ ತಂಡಗಳ ಮೂಲಕ ಸಕ್ರಿಯವಾಗಿ ಶ್ರಮಿಸಿದ್ದಾರೆ.

**ಕೊಪ್ಪಳ ರಂಗಭೂಮಿ**

ಈ ಜಿಲ್ಲೆಯ ಹವ್ಯಾಸಿ ರಂಗಪ್ರಯೋಗಗಳು ಹೈದರಾಬಾದ್ ಕರ್ನಾಟಕದ ರಂಗಭೂಮಿಯ ಚಿತ್ರಣವನ್ನೇ ಬದಲಿಸುವುದಕ್ಕೆ ಕಾರಣವಾದವು. ಕೊಪ್ಪಳ ಜಿಲ್ಲೆಯ ರಂಗಭೂಮಿ ಚಟುವಟಿಕೆಗಳ ಜಿಲ್ಲೆಯ ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ. ಪ್ರಸಿದ್ಧ ನಾಟಕಕಾರ, ನಿರ್ದೇಶಕ ಹಾಗೂ ನಟರ ಕುರಿತು ಅವಲೋಕನವನ್ನು ಇಲ್ಲಿ ಮಾಡಬೇಕಾಗುತ್ತದೆ.

ಕೊಪ್ಪಳ ರಂಗ ಕಲೆಯ ಸೆಳೆತವೇ ಅಂತಹದ್ದು. ಎಂತಹ ಪರಿಸ್ಥಿತಿ ಬಂದರೂ ಪ್ರದರ್ಶನ ಮಾತ್ರ ನಿಲ್ಲಿಸುವುದಿಲ್ಲ. ಇಂತಹ ಗಂಡುಕಲೆಯನ್ನು, ಕಲಾವಿದರನ್ನು ಪ್ರೇಕ್ಷಕರೂ ಪ್ರೋತ್ಸಾಹಿಸುತ್ತಾರೆ. ಅದರಲ್ಲೂ ವೃತ್ತಿ ರಂಗಭೂಮಿ ಕಲಾವಿದರನ್ನು ಪ್ರೇಕ್ಷಕರು ಈಗ ಕೈಹಿಡಿಯುತ್ತಿದ್ದಾರೆ. ಹೀಗಾಗಿ ಜಿಲ್ಲೆಯಲ್ಲಿ ಈಗಿರುವ ಮೂರು ಕಂಪನಿಗಳ ನಾಟಕಗಳಿಗೆ ಪ್ರೇಕ್ಷಕರಿಂದ ಒಳ್ಳೆ ಪ್ರತಿಕ್ರಿಯೆ ಸಿಗುತ್ತಿದೆ.

ವೃತ್ತಿ ರಂಗಭೂಮಿ ಕಲೆಯನ್ನೇ ನಂಬಿಕೊಂಡಿದ್ದ ಸಾವಿರಾರು ಕಲಾವಿದರು, ನಾಟಕ ಕಂಪನಿಗಳು ತುಸು ನಿಟ್ಟುಸಿರು ಬಿಟ್ಟಿವೆ. ಅನ್‌ಲಾಕ್ ಬಳಿಕ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು ಮೂರು ನಾಟಕ ಕಂಪನಿಗಳು ಕ್ಯಾಂಪ್ ಹಾಕಿದ್ದು, ಜಿಲ್ಲೆಯ ಜನರು ಕಲಾವಿದರನ್ನು ಕೈಹಿಡಿದು ಪ್ರೋತ್ಸಾಹಿಸುತ್ತಿದ್ದಾರೆ.

ಕೊಪ್ಪಳ ನಗರದಲ್ಲಿ ಶ್ರೀ ಘನಮಠೇಶ್ವರ ನಾಟ್ಯ ಸಂಘ ಕುಂಟೋಜಿ ಕಂಪನಿ, ಯಲಬುರ್ಗಾ ಪಟ್ಟಣದಲ್ಲಿ ಶ್ರೀ ಗುರು ತೋಂಟದಾರ್ಯ ನಾಟ್ಯ ಸಂಘ, ಮಂಡಲಗಿರಿ ಕಂಪನಿ ಹಾಗೂ ಕುಕನೂರು ಪಟ್ಟಣದಲ್ಲಿ ಶ್ರೀ ಕುಮಾರೇಶ್ವರ ನಾಟ್ಯ ಸಂಘ ಮಂಡಲಗಿರಿ ಕಂಪನಿ ಕ್ಯಾಂಪ್ ಹಾಕಿವೆ. ಯಲಬುರ್ಗಾದಲ್ಲಿ ಅತ್ತೆ ಸಿಂಗಾರಿ ಸೊಸೆ ಬಂಗಾರಿ, ಕುಕನೂರಿನಲ್ಲಿ ಗಂಗೆ ಹೋದಳು, ಗೌರಿ ಬಂದಳು ಹಾಗೂ ಕೊಪ್ಪಳ ನಗರದಲ್ಲಿನ ಶ್ರೀ ಘನಮಠೇಶ್ವರ ನಾಟ್ಯ ಸಂಘ ಕುಂಟೋಜಿ ಕಂಪನಿಯವರಿಂದ ಹೌದ್ದೋ ಹುಲಿಯಾ ನಾಟಕಗಳ ಪ್ರದರ್ಶನ ನಡೆಯುತ್ತಿವೆ. ಸಿನಿಮಾಗಿಂತ ನಾಟಕಗಳಿಗೆ ಜನರು ಹೆಚ್ಚು ಒಲವು ತೋರಿಸುತ್ತಿದ್ದು, ಹೌಸ್‌ಫುಲ್ ಆಗಿ ಪ್ರದರ್ಶನ ಕಾಣುತ್ತಿವೆ. ಕೊರೊನಾದಿಂದಾದ ಸಂಕಷ್ಟಕ್ಕೆ ನಾಟಕ ಕಂಪನಿಗಳಿಗೆ ಹಾಗೂ ವೃತ್ತಿ ರಂಗಭೂಮಿ ಕಲಾವಿದರಿಗೆ ಪ್ರೇಕ್ಷಕರಿಂದ ಸಿಗುತ್ತಿರುವ ಅಭೂತಪೂರ್ವ ಪ್ರೋತ್ಸಾಹ ಮತ್ತಷ್ಟು ಹುಮ್ಮಸ್ಸು ನೀಡಿದೆ.ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ಕಂಪನಿಗಳಿದ್ದು, ವೃತ್ತಿ ರಂಗಭೂಮಿಗೆ ಕೊಪ್ಪಳ ಜಿಲ್ಲೆಯ ಕೊಡುಗೆ ಅಪಾರವಾಗಿದೆ. ಇಲ್ಲಿ 1903ರಿಂದ ಪಾರಂಭವಾಗುವ ಈ ನಾಟಕ ಕಂಪನಿಗಳು ಇಂದಿಗೂ ಜೀವಂತವಾಗಿದ್ದು, ರಂಗಭೂಮಿಯ ಮಹತ್ವವನ್ನು ಹೇಳುತ್ತವೆ. ಹಿರಹಟ್ಟಿ ವೆಂಕೋಬರಾಯರು, ಗರುಡ ಸದಾಶಿವರಾಯರು, ಪ್ರಾರಂಭದ ನಾಟಕ ಕಂಪನಿಗಳ ಮಾಲೀಕರಾಗಿದ್ದಾರೆ.

**ಬಳ್ಳಾರಿ ರಂಗಭೂಮಿ**

ಬಳ್ಳಾರಿ ಜಿಲ್ಲೆಯ ರಂಗಭೂಮಿ ಬೆಳೆವಣಿಗೆಗೆ ಕಂದಗಲ್ ಹನುಮಂತರಾಯರು, ಬೆಳಗಲು ವೀರಣ್ಣ, ಜಗದೀಶ್ ಬಳ್ಳಾರಿ, ರಾಘವ, ಮುಂತಾದವರು ಶ್ರಮಿಸಿದ್ದಾರೆ. ನೂತನವಾಗಿ ರಚನೆಯಾದ ವಿಜಯನಗರ ಜಿಲ್ಲೆಯ ರಂಗಭೂಮಿ ಬೆಳವಣಿಗೆಗೆ ಬಿ.ಎಂ.ಎಸ್. ಪ್ರಭು, ಮರಿಯಮ್ಮನಹಳ್ಳಿ ನಾಗರತ್ನಮ್ಮ, ಚಮನ್ ಸಾಬ್, ಮಲ್ಲಪ್ಪ, ಪಿ. ಅಬ್ದುಲ್ಲ, ಹುಲಿಗೆಪ್ಪ ಎಸ್. ಎಂ., ಹೆಚ್. ಜಿ. ಸುಂಕಪ್ಪ, ಆರ್ದಿ ಮಂಜುನಾಥ್ ಮತ್ತು ವೀರೇಶ್ ದಳವಾಯಿ, ಸೇರಿದಂತೆ ಹಲವಾರು ರಂಗಕರ್ಮಿಗಳು ಹಾಗೂ ಕಲಾವಿದರು ಚಿಗುರು ಕಲಾತಂಡ, ರಂಗ ಜಂಗಮ, ನೇತ್ರ ಕಲಾಸಂಘ, ಅಕ್ಷಯ ಕಲಾ ಟ್ರಸ್ಟ್ ಸೇರಿದಂತೆ ಅನೇಕ ರಂಗ ತಂಡಗಳ ಮೂಲಕ ಸಕ್ರಿಯರಾಗಿ ಶ್ರಮಿಸುತ್ತಿದ್ದಾರೆ.

**ಯಾದಗಿರಿ ರಂಗಭೂಮಿ**

ಯಾದಗಿರಿ ಕರ್ನಾಟಕ ರಾಜ್ಯದ ಒಂದು ಜಿಲ್ಲೆ. 30ನೇ ಜಿಲ್ಲೆಯಾಗಿ 'ಯಾದಗಿರಿ' ಏಪ್ರಿಲ್ 10, 2010ರಂದು ಅಸ್ತಿತ್ವಕ್ಕೆ ಬಂದಿತು. ಶಹಾಪುರ ಮತ್ತು ಸುರಪುರ ತಾಲ್ಲೂಕುಗಳನ್ನು ಸೇರಿಸಿ ಹೊಸ ಜಿಲ್ಲೆ

ರಚನೆ ಮಾಡಲಾಗಿದೆ. ಆಗಸ್ಟ 27, 2008ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಗುಲ್ಬರ್ಗ ಜಿಲ್ಲೆಯನ್ನು ವಿಭಜಿಸಿ ಯಾದಗಿರಿ ಪಟ್ಟಣವನ್ನು ಕೇಂದ್ರವಾಗಿಸಿಕೊಂಡು ಹೊಸ ಜಿಲ್ಲೆ ರಚಿಸಲು ಅಂತಿಮ ನಿರ್ಣಯ ಕೈಗೊಂಡು, ಈ ಸಂಬಂಧ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಡಿಸೆಂಬರ್ 23, 2009ರಂದು ವಿಧಾನಸಭೆಯಲ್ಲಿ ಅಧಿಕೃತ ಜಿಲ್ಲೆಯಾಗಿ ಘೋಷಿಸಲಾಯಿತು.

ಯಾದಗಿರಿ, ಗುಲ್ಬರ್ಗ ಜಿಲ್ಲೆಯ ಒಂದು ತಾಲೂಕು, ಈಗ ಯಾದಗಿರಿ ಜಿಲ್ಲೆಯಾಗಿದೆ. ಜಿಲ್ಲೆಯ ರಂಗಭೂಮಿ ಬೆಳವಣಿಗೆಗೆ ಪ್ರಕಾಶ್ ಅಂಗಡಿ, ರಾಜೇಂದ್ರ, ಕಂಟೆಪ್ಪ ಮಾಸ್ತರ್, ರಾಮ ಕೆಂಬಾವಿ, ಬಾಸಮಿಯ ಮುದ್ನಾಳ್, ನಕ್ಕಜಲ್ಲಪ್ಪ, ಡಿ.ಎಸ್. ಕುಮಾರ್, ಮಲ್ಲೇಶ್ ಕೋನಾಳ, ಶರಣಪ್ಪ ಹಾಲಬಾವಿ, ಎಲ್ಲೇಶಿ ಯಾಳಗಿ, ರಾಜಣ್ಣ, ಬಸವರಾಜ ಪಂಚಗಲ್, ಮಾಂತಯ್ಯ ಸ್ವಾಮಿ ಕಾನಪುರ್, ಗುರು ಬಸಯ್ಯ ಮಾಪುರ್, ರಮಾನಂದ ಹಿರೆಜೇವರ್ಗಿ, ಈಶ್ವರಯ್ಯ ಮಠ, ಸೇರಿದಂತೆ ಹಲವಾರು ರಂಗಕರ್ಮಿಗಳು ಹಾಗೂ ಕಲಾವಿದರು ರಂಗ ತಂಡಗಳ ಮೂಲಕ ಸಕ್ರಿಯರಾಗಿದ್ದಾರೆ.

**ಬೀದರ್ ರಂಗಭೂಮಿ**

ಬೀದರ್ ಜಿಲ್ಲೆಯ ರಂಗಭೂಮಿ ಕುರಿತು ಮಾಹಿತಿ ನೀಡಲಾಗಿದೆ. ಬೀದರ್ ಜಿಲ್ಲೆಯ ರಂಗಭೂಮಿಯ ಹಿನ್ನೆಲೆ, ಸಣ್ಣಾಟಗಳು, ಬಯಲಾಟಗಳು, ಕೋಲಾಟ, ಅರೆ ವೃತ್ತಿ ರಂಗಭೂಮಿ, ವೃತ್ತಿ ರಂಗಭೂಮಿ, ನಾಟಕಕಾರರು, ನಾಟಕಗಳು, ಹವ್ಯಾಸಿ ರಂಗ ತಂಡಗಳು, ಎದೆ ತುಂಬಿ ಹಾಡಿದ ರಂಗ ಗೀತೆಗಳು, ಮಕ್ಕಳ ರಂಗ ನಾಟಕಗಳು, ಸಂಘಟಕರು, ಕಲಾವಿದರು, ಸಂಗೀತಕಾರರು, ನೇಪಥ್ಯ ಕಲಾವಿದರು, ಕಲಾವಿದೆಯರು, ನಾಟಕ, ಸಂಗೀತ ಪರಿಕರಗಳು ದೊರೆಯುವ ಸ್ಥಳ, ರಂಗ ಮಂದಿರಗಳು ಒಂದು ನೋಟ, ವಿವಿಧ ಶಾಲೆಗಳ ಪದವಿ ಪಡೆದವರು, ಚಲನಚಿತ್ರಗಳಲ್ಲಿ ನಟಿಸಿದ ಕಲಾವಿದರು, ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು ಮುಂತಾದವರು ಇಲ್ಲಿದ್ದಾರೆ. ರಂಗಭೂಮಿಯ ಬೆಳವಣಿಗೆಗೆ ಎಲ್ಲರೂ ಶ್ರಮಿಸುತ್ತಿದ್ದಾರೆ.

ಉತ್ತರ ಕರ್ನಾಟಕದ ಬೀದರ್‌ನಲ್ಲಿ ಕಟ್ಟಿಮನಿ ಸೋದರರು ಐದು ನಾಟಕ ಕಂಪನಿಗಳನ್ನು ಕಟುವುದರ ಮೂಲಕ ಕನ್ನಡ ರಂಗಭೂಮಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಮಹಿಳೆಯರನ್ನು ಸೇರಿಸಿಕೊಂಡು ಕಟ್ಟಿದ, ಕೊಪ್ಪಳದ ನಟರಾಜ ನಾಟಕ ಕಂಪನಿ ಯಶಸ್ವಿಯ ಹೆಜ್ಜೆ ಇಟ್ಟಿದೆ.

**ಕಲಬುರಗಿ ರಂಗಭೂಮಿ**

ಕಲಬುರಗಿ ಜಿಲ್ಲೆ ರಂಗಭೂಮಿ ಪರಂಪರೆ, ರಂಗ ಪ್ರಕಾರಗಳು, ರಂಗ ಚಟುವಟಿಕೆಗಳ ಆರಂಭ ಕಾಲ, ಮಕ್ಕಳ ರಂಗಭೂಮಿ, ಹವ್ಯಾಸಿ ರಂಗಭೂಮಿ, ವೃತ್ತಿ ನಾಟಕ ಸಂಘಗಳು, ಹವ್ಯಾಸಿ ಕಲಾವಿದರು, ನೇಪಥ್ಯ ಕಲಾವಿದರು, ವೃತ್ತಿ, ನೇಪಥ್ಯ ಮತ್ತು ಗ್ರಾಮೀಣ ಕಲಾವಿದರು ಹಾಗೂ ಕಂಪನಿ ನಾಟಕಗಳು ಹೀಗೆ ಕಲಬುರಗಿ ಜಿಲ್ಲೆಯ ರಂಗಭೂಮಿ ಚಟುವಟಿಕೆಗಳಿಂದ ಕೂಡಿದೆ.

ಕಲಬುರಗಿಯಲ್ಲಿಯೂ ಸಾಹಿತ್ಯ, ಕಲೆ, ಸಂಸ್ಕೃತಿ, ರಂಗಭೂಮಿ ಕಲಾ ಪರಂಪರೆ ತೆರೆದುಕೊಂಡಿದೆ. ನಾಟಕ ಸಾಹಿತ್ಯ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಕಲಬುರಗಿ ಜಿಲ್ಲೆಯ ಕೊಡುಗೆ ಅಪಾರವಾದದ್ದಾಗಿದೆ. ಹವ್ಯಾಸಿ ರಂಗಪ್ರಯೋಗಗಳು ಹೈದರಾಬಾದ್ ಕರ್ನಾಟಕದ ರಂಗಭೂಮಿಯ ಚಿತ್ರಣವನ್ನೇ ಬದಲಿಸುವುದಕ್ಕೆ ಕಾರಣವಾದವು. ಸಮುದಾಯ ಸಾಂಸ್ಕೃತಿಕ ಸಂಘಟನೆಯ ಮೂಲಕ ಆರಂಭವಾದ ಬೀದರ್, ರಾಯಚೂರು ಸೇರಿದಂತೆ ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳಿಗೂ ಪಸರಿಸಿತು.

ಕಲ್ಬುರ್ಗಿ ಜಿಲ್ಲೆಯ ಭಾಗಗಳಲ್ಲಿ ಫ್ಯುಡಲ್ ವ್ಯವಸ್ಥೆಯನ್ನು ವಿರೋಧಿಸುವ ನಾಟಕಗಳನ್ನಾಡುತ್ತಿದ್ದ ಕಂಪನಿಗಳಲ್ಲಿಯೇ ಹೆಚ್ಚು. ಫ್ಯುಡಲ್ ವ್ಯವಸ್ಥೆ ಇರುವುದು ಕಂಡುಬರುತ್ತದೆ. ಆದರೆ ಇಂತಹ ಅನೇಕ ಮಿತಿಗಳ ನಡುವೆಯೂ ರಂಗಭೂಮಿ ಮಹತ್ತರವಾದುದನ್ನು ಈ ಜಿಲ್ಲೆಯಲ್ಲಿ ಸಾಧಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶಾಲೆ, ಕಾಲೇಜುಗಳು ಇರದೇ ಇದ್ದ ಆ ಕಾಲಘಟ್ಟದಲ್ಲಿ ನಾಟಕ ಕಂಪನಿಗಳೇ ಜನಸಮಾನ್ಯರ ಶಾಲೆಗಳಾಗಿ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟು, ಜಾಗೃತಿಯನ್ನು ಉಂಟು ಮಾಡಿರುವುದು ಮಹತ್ವದ ಸಂಗತಿಯಾಗಿದೆ.ಗುಲ್ಬರ್ಗದಲ್ಲಿ ಹೊಸ ಅಲೆಯ, ವೈಚಾರಿಕ ನಾಟಕಗಳ, ಹೊಸ ಬಗೆಯ ರಂಗ ಪ್ರಯೋಗ ಆರಂಭಿಸಿದ ಕೀರ್ತಿ ಇಲ್ಲಿನ ರಂಗಮಾಧ್ಯಮದ್ದಾಗಿದೆ. ಅಸಂಗತ, ನವ ವೈಚಾರಿಕ ನಾಟಕಗಳ ಪ್ರಯೋಗ, ರಂಗಸಜ್ಜಿಕೆ, ಬೆಳಕು, ಧ್ವನಿ, ನಾಟಕದಲ್ಲಿ ಸಂಗೀತದ ಬಳಕೆ ಈ ಎಲ್ಲವು ಗುಲಬರ್ಗಾದ ರಂಗ ಪ್ರೇಕ್ಷಕರಲ್ಲಿ ಅಚ್ಚರಿ, ಆನಂದ ಮೂಡಿಸಿರುವುದನ್ನು ಗಮನಿಸಲಾಗಿದೆ.

ಉತ್ತರ ಕರ್ನಾಟಕ ಭಾಗದ ಪ್ರಮುಖ ಜಿಲ್ಲೆಗಳಾದ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿನ ಮೂಲ ಸಾಮಾಜಿಕ ಸಮಸ್ಯೆಗಳು ಈಪ್ರದೇಶಗಳ ಅಭಿವೃದ್ಧಿಗೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡಿದ್ದವು. ಅಲ್ಲದೆ ಆಳುವ ವರ್ಗಗಳ ದುರಾಡಳಿತವನ್ನು ಸಮರ್ಥವಾಗಿ ಬದಲಾವಣೆ ತರುವಲ್ಲಿ ಈ ಪ್ರದೇಶದ ರಂಗಭೂಮಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದೆ. ಸಮಾಜದ ಅವ್ಯವಸ್ಥೆ, ಅನೀತಿ, ಅಧರ್ಮ, ಅಸಹಿಷ್ಣುತೆ, ದ್ವೇಷ ಮನೋಭಾವ, ಪರಸ್ಪರ ಸಂಘರ್ಷ ಮನಸ್ಥಿತಿಯನ್ನು ಸರಿಪಡಿಸಲು ಜನ ಜಾಗೃತಿ ಜಾಥಾ, ಕಾರ್ಯಾಗಾರ, ವಿಚಾರ ಸಂಕಿರಣ, ಸಮ್ಮೇಳನ, ಮುಕ್ತ ಚರ್ಚೆ ಮತ್ತು ಸಂವಾದ ಮಾಡುತ್ತಾ ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಇಲ್ಲಿನ ರಂಗಕರ್ಮಿಗಳು, ರಂಗ ತಂಡಗಳು ಹಾಗೂ ಕಲಾವಿದರು ಕಾಲ ಕಾಲಕ್ಕೆ ಅನುಗುಣವಾದ ಸಮಸ್ಯೆ ಆಧಾರಿತ ನಾಟಕ ಪ್ರದರ್ಶನಗಳಿಂದ ಸಾಕಷ್ಟು ಸುಧಾರಿಸಿವೆ. ಉತ್ತರ ಕರ್ನಾಟಕದ ಸಾಮಾಜಿಕ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಜನರಿಗೆ ತಿಳಿಸುವ ಕೆಲಸವನ್ನು ಸಹ ರಂಗಭೂಮಿ ಮಾಡುತ್ತಾ ಬಂದಿದೆ. ಆದ್ದರಿಂದ ರಂಗಭೂಮಿಯ ಪ್ರಸ್ತುತತೆ ಎಷ್ಟು ಮುಖ್ಯವೋ ರಂಗ ತಂಡದ ಸೃಜನ ಕಾರ್ಯವೂ ಅಷ್ಟೇ ಪ್ರಸ್ತುತವಾಗಿದೆ. ಆದ್ದರಿಂದ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳ ಸಾಮಾಜಿಕ

ಸಮಸ್ಯೆಗಳನ್ನು ಪರಿಹರಿಸಲು ಜಾಗೃತವಾಗಿ ಕಾರ್ಯನಿರ್ವಹಿಸಿರುವ ರಂಗಭೂಮಿಯ ಕೊಡುಗೆ ಅಪಾರವಾಗಿದೆ.

ಉತ್ತರ ಕರ್ಣಾಟಕದ ಕೆಲವು ಜಿಲ್ಲೆಗಳಲ್ಲಿ ರಂಭೂಮಿ ಪ್ರತಿಯೊಂದು ಹಳ್ಳಿಯಲ್ಲಿಯೂ ಜೀವಂತ ಕಲೆಯಾಗಿದೆ. ವಿವಿಧ ವೇಷ ಹಾಕುವ ವೇಷಗಾರರು, ಕಲೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡು, ಪ್ರತಿ ವರುಷವೂ ಹಳ್ಳಿಗಳಲ್ಲಿ ವಾರಗಟ್ಟಲೆ ವೇಷ ಹಾಕಿ, ವಿವಿಧ ಕಥಾ ಪ್ರಸಂಗಗಳನ್ನು ತೋರಿಸಿ ಕಾಣಿಕೆಯನ್ನು ಪಡೆಯುತ್ತಿರುವುದನ್ನು ಕಾಣಬಹುದಾಗಿದೆ.

ಒಬ್ಬ ರಂಗಕರ್ಮಿ ಯೋಗ್ಯ ಎನಿಸಿಕೊಳ್ಳಲು ಆತ ಎಲ್ಲಾ 'ಇಸಮ್'ಗಳಿಂದ ದೂರ ಇರಬೇಕು. ರಂಗಭೂಮಿಯ ವಿಷನ್ ಮತ್ತು ಇಸಮ್ ಅರ್ಥ ಮಾಡಿಕೊಂಡ ವ್ಯಕ್ತಿ ನಿಜವಾದ ರಂಗಕರ್ಮಿ ಎನಿಸಿಕೊಳ್ಳುತ್ತಾನೆ. ರಂಗಭೂಮಿ ಎಂಬುದು ಅನುಭವಿಸಿ ಪ್ರದರ್ಶಿಸುವ ಕಲೆ. ಯೋಜನೆ ಮತ್ತು ಯೋಚನೆಗಳು ಮಾಗುವುದು ಅನುಭವಗಳ ಹಿನ್ನೆಲೆಯಲ್ಲಿ. ಸಿದ್ಧಾಂತಗಳು ಅಡ್ಡ ಬರಬಾರದು. ಕಲೆ ಕಲೆಗಾಗಿ ಅನ್ನುವುದು ಬೇರೆ. ರಂಗಭೂಮಿ ಕೇವಲ ಮನೋರಂಜನಾ ಉದ್ದೇಶಕ್ಕೆ ಸೀಮಿತವಾಗಬಾರದು. ಸಾಮಾಜಿಕ ಬದಲಾವಣೆಯ ಮಾಧ್ಯಮ ಆಗಬೇಕು. ಅದು ರಂಗಭೂಮಿಯ ಸಾರ್ಥಕತೆ. ರಂಗಭೂಮಿಯನ್ನು ಒಳಗೊಂಡ ಎಲ್ಲಾ ಪ್ರಕಾರಗಳೂ ಈ ರೀತಿ ಇರಬೇಕು. ಅಷ್ಟರ ಮಟ್ಟಿಗೆ ರಂಗಭೂಮಿ ಜನ-ಮನದ ಮೇಲೆ ಪ್ರಭಾವ ಮತ್ತು ಪರಿಣಾಮ ಬೀರಬೇಕು.

ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಮಹಾ ಕಲಾವಿದನನ್ನಾಗಿ ಮಾಡುವ ಶಕ್ತಿ ರಂಗಭೂಮಿಗಿದೆ. ಇದಕ್ಕೆ ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯೂ ಹೊರತಾಗಿಲ್ಲ. ಕುಕನೂರಿನ ರಹಮಾನವ್ವನೆಂಬ ಒಬ್ಬ ಮುಸ್ಲಿಂ ಮಹಿಳೆ ನಾಟಕ ಕಂಪನಿ ಕಟ್ಟಿ ಇಡೀ ತನ್ನ ಕುಟುಂಬವನ್ನೇ ರಂಗಭೂಮಿಗಾಗಿ ಮೀಸಲಿಟ್ಟು ರಂಗಸೇವೆ ಮಾಡಿರುವುದು ಇತಿಹಾಸದಲ್ಲಿ ದಾಖಲಾಗಿದೆ.

1860ರ ಸುಮಾರಿಗೆ ಉತ್ತರ ಕರ್ನಾಟಕದ ಮಂಡಲಿಯ ನಟರೂ ಹೆಸರಿಗೆ ಆಸೆಪಡದೆ ಎಲೆಮರೆಯ ಕಾಯಿಯಂತೆ ಜನ ಸೇವೆಗೈದರು. ನಾಟಕದ ಒಂದು ತಂಡ, ಒಂದು ಕಂಪನಿಯಾಗಿ ಬೆಳೆಯಲು ನಟರು ಮುಖ್ಯ ಕಾರಣರಾಗಲೇಬೇಕು. ಸಂಗೀತದಿಂದಲೇ ಗದ್ಯಭಾಗವನ್ನು ಸ್ಪಷ್ಟವಾಗಿ ಅಭಿನಯಪೂರ್ವಕವಾಗಿ ನಟಿಸುವುದರಿಂದಲೇ ಜನಮನ ಮೆಚ್ಚಿಸುವುದು ಆಗಿನ ಪದ್ಧತಿ. ಸಂಗೀತದಿಂದ ಜನರನ್ನು ಮೆಚ್ಚಿಸಿದ ಕಲಾವಿದರು ಒಳ್ಳೆಯ ನಟರಾಗಿ, ಗಾಯನಪಟುಗಳಾಗಿ ಕಂಪನಿಯ ನಾಯಕರಾಗಿ, ನಟರಿಗೂ ನಾಟಕಕ್ಕೂ ನಿರ್ದೇಶಕರಾಗಿ ವಿಜೃಂಭಿಸಿದರು. ಅವರ ಶರೀರ, ಶಾರೀರ; ನಾಯಕರಾಗಿ ಒಂದು ಗುಂಪನ್ನು ತಯಾರಿಸಿ ಶಿಸ್ತಿನಿಂದ ನಡೆಸಲು ಬೇಕಾದ ಆತ್ಮಶಕ್ತಿ ಮತ್ತು ಸತ್ವ ಇದ್ದವು. ಈ ಸಂಪತ್ತಿನ ಯೋಗ್ಯ ಪ್ರದರ್ಶನದಿಂದಲೇ ಇವರು ನಡೆಸುತ್ತಿದ್ದ ಕಂಪನಿ ಜೀವಂತವಾಗಿತ್ತು.

ಅಭಿನಯ ಎಲ್ಲ ಕಲಾ ಪ್ರಕಾರಗಳಲ್ಲಿ ಮಹತ್ವದ ಮನ್ನಣೆ ಪಡೆದಿರುವ ಪ್ರಮುಖ ಕಲೆ. ನಟನೆ ಕೆಲವರಲ್ಲಿ ರಕ್ತಗತವಾಗಿ ಅಂತರ್ಗತವಾಗಿರುತ್ತಾದರೂ ಇನ್ನು ಹಲವರಿಗೆ ಕಲಿಕೆಯಿಂದ ಒಡಮೂಡಿರುತ್ತದೆ. ಅಭಿನಯವನ್ನು ಸಂಪೂರ್ಣ ಕರಗತ ಮಾಡಿಕೊಂಡವರು ಮಾತ್ರ ಹೆಚ್ಚಿನ ಹೆಸರು ಮಾಡಲು ಸಾಧ್ಯ. ಈ ಕಲಾವಿದ ವೇದಿಕೆಯಲ್ಲಿದ್ದರೆ ಮಾತ್ರ ತಪ್ಪದೆ ನಾಟಕ ನೋಡುತ್ತೇನೆ ಎನ್ನುವ ರೀತಿಯಲ್ಲಿ ವೀಕ್ಷಕರಿಂದ ಮನ್ನಣೆಯನ್ನು ಕೆಲವರು ಗಳಿಸಿರುತ್ತಾರೆ. ಕರ್ನಾಟಕದಲ್ಲಿ ರಂಗಭೂಮಿ ಎಂದಾಕ್ಷಣ ನೀಲಕಂಠೇಶ್ವರ ನಾಟ್ಯ ಸಂಘ (ನೀನಾಸಂ), ರಂಗಾಯಣ, ರಂಗಶಂಕರ, ಗುಬ್ಬಿ ವೀರಣ್ಣ ನಾಟಕ ಕಂಪನಿ, ಬೆನಕ ಹೀಗೆ ನಾಟಕಕ್ಕೆ ಸಂಬಂಧಿಸಿದ ಹಲವು ಹೆಸರುಗಳು ನೆನಪಿಗೆ ಬರುತ್ತದೆ.

ರಂಗಭೂಮಿಯ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಉತ್ತರ ಕರ್ನಾಟಕದ ಪಾಲು ಬಹುದೊಡ್ಡದು ಮತ್ತು ವಿಶಿಷ್ಟವಾದದ್ದು. ನೂರಾರು ನಾಟಕ ಕಂಪನಿಗಳು ಮತ್ತು ಸಾವಿರಾರು ಕಲಾವಿದರು ಈ ನೆಲದಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟಕ್ಕೆ ಜಿಗಿದಿದ್ದಾರೆ. ಉತ್ತರ ಕರ್ನಾಟಕದ ಪ್ರಸಿದ್ಧ ರಂಗಭೂಮಿ ಕಲಾವಿದರು ಮತ್ತು ಕಲಾ ತಂಡಗಳ ಪರಿಚಯ ಮಾಡಲಾಗಿದೆ.

ಉತ್ತರ ಕರ್ನಾಟಕದ ಪ್ರಮುಖ ತಂಡಗಳು ಮತ್ತು ಕಲಾವಿದರು :-

1. ಕೃತಪುರ ನಾಟಕ ಮಂಡಳಿ – ಶಾಂತ ಕವಿಗಳು.
2. ಹಲಸಗಿ ನಾಟಕ ಮಂಡಳಿ – ವೆಂಕಣ್ಣಾಚಾರ್ಯ ಅಗಳಗಟ್ಟಿ (ಶ್ರೀನಿವಾಸ ಕವಿ)
3. ತಂತು ಪುರಸ್ಥ ನಾಟಕ ಮಂಡಳಿ – ಭೀಮಾಚಾರ್ಯ ಏರಿ, ಗೋಪಿನಾಥ ರಾವ್ ಜೋಷಿ, ರಾಮಚಂದ್ರ, ಭಾವು ಹಲಸಿಗಿ, ದತ್ತಾತ್ರೇಯ ರಾವ್.
4. ಹಿಂದೂ ಯೂನಿಯನ್ ಕ್ಲಬ್ – ಗಣಪತ ರಾವ್ ಜೋಷಿ, ಬಳವಂತ ರಾವ್ ಜೋಗ್.
5. ಷಾಹು ನಗರವಾಸಿ ನಾಟಕ ಮಂಡಳಿ –
6. ಭರತ ಕಲೋತ್ತೇಜಕ ಸಂಗೀತ ಸಮಾಜ – ಧಾರವಾಡ ತಾಲೂಕಿನ ಮದಿಯಾಳ ಗ್ರಾಮ ವಹಿಸಿಕೊಂಡಿತು. 1896 – 1905, ಪ್ರಾಚ್ಯ ಕ್ರೀಡಾ ಸಂವರ್ಧಕ ಮಂಡಳಿ (ಮೊದಲು ಇದ್ದ ಸಂಸ್ಥೆ)
7. ಶಿರಹಟ್ಟಿ ನಾಟಕ ಮಂಡಳಿ – ಶ್ರೀ ಮಹಾಲಕ್ಷ್ಮಿ ಪ್ರಾಸಾದಿತ ನಾಟಕ ಮಂಡಳಿ – ವೆಂಕೋಬ ರಾವ್ ಹಲಗೇರಿ ಕರ್ ಅಥವಾ ಶಿರಹಟ್ಟಿ ವೆಂಕೋಬ ರಾಯರು.
8. ಕೊಣ್ಣೂರ್‌ಕರ್ ಕಾಡಸಿದ್ದೇಶ್ವರ ನಾಟಕ ಮಂಡಳಿ – ಶಿವಮೂರ್ತಿ ಸ್ವಾಮಿ ಕಣಬರ್ಗಿ ಮಠ.
9. ವಿಶ್ವ ಗುಣಾದರ್ಶ ನಾಟಕ ಮಂಡಳಿ – ರಬಕವಿ ಊರಿನ ವಾಮನ ರಾಯರು.

10. ಹಲಗೇರಿ ಕಂಪನಿ – ಶ್ರೀ ಹಾಲಸಿದ್ದೇಶ್ವರ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ. ಹಲಗೇರಿ ಗ್ರಾಮಸ್ಥರು ಮತ್ತು ಲಿಂಗನಗೌಡ ಪಾಟೀಲರು.
11. ದತ್ತಾತ್ರೇಯ ಸಂಗೀತ ಮಂಡಳಿ – ನಾಟಕಾಲಂಕಾರ ಗರುಡ ಸದಾಶಿವ ರಾಯರು. (1916)
12. ಶ್ರೀ ಕೃಷ್ಣ ನಾಟಕ ಮಂಡಳಿ – ರಂಗನಾಯಕಿ ಗಂಗೂಬಾಯಿ ಗುಳೇದ ಗುಡ್ಡ.
13. ಜಯಕರ್ನಾಟಕ ನಾಟಕ ಮಂಡಳಿ –
14. ವಿಶ್ವ ರಂಜನ ನಾಟಕ ಮಂಡಳಿ –
15. ಶ್ರೀರಾಮ ಸೇನಾ ನಾಟ್ಯ ಸಂಸ್ಥೆ – ಮುದ್ದುವೀರಾಚಾರ್ಯ.
16. ವಾಣಿವಿಲಾಸ ನಾಟಕ ಮಂಡಳಿ – ಬಸವರಾಜ ಮನ್ಸೂರ್ ಹಾಗೂ ಗೋಹರ್ ಕರ್ಣಾಟಕಿಯರು.
17. ಕೊಪ್ಪಳ ಸಂಗೀತ ನಾಟಕ ಮಂಡಳಿ –
18. ವಿಜಯಲಕ್ಷ್ಮಿ ನಾಟಕ ಸಂಸ್ಥೆ –
19. ಲಕ್ಷ್ಮೀಶ್ವರ ಸ್ತ್ರೀ ನಾಟಕಮಂಡಳಿ – ಸ್ತ್ರೀ ಕಲಾವಿದರೇ ಕಟ್ಟಿಕೊಂಡಿದ್ದು.
20. ಕೆಬಿಆರ್ ನಾಟಕ ಮಂಡಳಿ –
21. ಕಲಾವೈಭವ ನಾಟಕ ಸಂಘ – ಏಣಗಿ ಬಾಳಪ್ಪ
22. ಕುಮಾರೇಶ್ವರ ಸಂಗೀತ ನಾಟಕ ಮಂಡಳಿ – ಗಂಗಾಧರ ಶಾಸ್ತ್ರಿ ಛತ್ತರಗಿ
23. ವಸಂತಕಲಾ ನಾಟ್ಯ ಸಂಘ – ಸಂಗೀತಜ್ಞರಾದ ಅರ್ಜುನ ಸಾ ನಾಕೋಡ
24. ಸರಸ್ವತಿ ನಾಟಕ ಸಭಾ – ಬಳ್ಳಾರಿ 1912ರಲ್ಲಿ ಜಗತೇರಿ ವೀರಬಸಪ್ಪನವರು ಕೊಟ್ಟೂರಿನಲ್ಲಿ ಆರಂಭಿಸಿದ್ದ ಸಂಸ್ಥೆ
25. ಟಿ. ರಾಘವ – ಬಳ್ಳಾರಿ.
26. ಹೈದರಾಬಾದ್ ಕರ್ನಾಟಕ – ನೈಜಾಮ್ ಕರ್ಣಾಟಕ –ಶಿರಹಟ್ಟಿ ವೆಂಕೋಬ ರಾವ್ ಮತ್ತು ಗರುಡ ಸದಾಶಿವ ರಾಯರು.
27. ಮದ್ವರಾಜ ಉಮ್ಮರ್ಜಿ – ಬಿಜಾಪುರ ಜಿಲ್ಲೆ ಬೀಳಗಿ.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರಂಗಚಟುವಟಿಕೆಗಳ ಜೀವಂತಿಕೆಗೆ ಹಾಗೂ ಹೊಸ ರೀತಿಯ ನಾಟಕಗಳನ್ನು ನೋಡುವ ಅವಕಾಶವನ್ನು ಪ್ರೇಕ್ಷಕರಿಗೆ ಒದಗಿಸಲು ಅನೇಕ ತಂಡಗಳನ್ನು ಆಮಂತ್ರಿಸಿ, ನಾಟಕ ಪ್ರದರ್ಶನ ಏರ್ಪಡಿಸುವ ರೂಢಿ ಜಾರಿಗೊಳಿಸಿತು. ಹೆಗ್ಗೋಡಿನ 'ನೀನಾಸಂ' ಸಂಸ್ಥೆ ತಿರುಗಾಟ ನಾಟಕ ಪ್ರದರ್ಶನಗಳನ್ನು ಪ್ರತಿ ವರುಷ ಸಂಘಟಿಸುತ್ತಿತ್ತು. ಭೂಪಾಲದ 'ರಂಗ ಮಂಡಲ' ರೆಪರ್ಟರಿ,

ಬೆಂಗಳೂರಿನ 'ಸೂತ್ರಧಾರ', 'ನಟರಂಗ', 'ಬೆನಕ', 'ಸ್ಪಂದನ', 'ರಂಗಸಂಪದ' ಈ ತಂಡಗಳ ಶ್ರೇಷ್ಠ ನಾಟಕಗಳ ಪ್ರದರ್ಶನವನ್ನು ಕರ್ನಾಟಕ ನಾಟಕ ಅಕಾಡೆಮಿಯ ಸಹಕಾರದೊಂದಿಗೆ 'ರಂಗಮಾಧ್ಯಮ' ಸಂಘಟಿಸಿದೆ.

ನಾಟಕ ಆಸಕ್ತರಿಗೆ ಹೊಸ ಅಲೆ, ಚಿಂತನಪರ, ವೈಚಾರಿಕ ಅಲೆಯ ನಾಟಕಗಳ ಪರಿಚಯವಾಗಬೇಕಿದೆ. ಹವ್ಯಾಸಿ ನಾಟಕ ನೋಡುವ ಪರಂಪರೆಯ ಸೃಷ್ಟಿ ಹಾಗೂ ಆಸಕ್ತ ಸಿದ್ಧ ಪ್ರೇಕ್ಷಕರ ನಿರ್ಮಾಣ. ಪ್ರೇಕ್ಷಕರಿಗೆ ಅಸಂಗತ ನಾಟಕಗಳ ಪರಿಚಯ, ನೂರಾರು ರಂಗ ಕಲಾವಿದರ ನಿರ್ಮಾಣ, ಅವಕಾಶ ಬೇಕಾಗಿದೆ. ಯುವಕರಲ್ಲಿ ನಾಟಕ ಅಭಿರುಚಿಯ ಪ್ರೇರಣೆ ಕೊಟ್ಟಿರುವುದನ್ನು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಗುರುತಿಸಬಹುದಾಗಿದೆ. ಸರಕಾರ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ರಂಗಭೂಮಿ ಕಡೆ ಕಣ್ಣುಹಾಯಿಸಬೇಕಿದೆ. ಉತ್ತರ ಕರ್ನಾಟಕದ ಜಿಲ್ಲಾ ಮಟ್ಟಗಳಲ್ಲಿರುವ ರಂಗ ಮಂದಿರಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಮುಂದಾಗಬೇಕು. ನಾಟಕಕ್ಕೆ ಬೇಕಾದ ವೇದಿಕೆ, ಆಸನ, ಬೆಳಕು, ಆಧುನಿಕ ಸೌಲಭ್ಯಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು.

ಶಿಕ್ಷಣ ಸಂಸ್ಥೆಗಳಲ್ಲಿರುವ ಬಯಲು ರಂಗಮಂದಿರವನ್ನು ಬಾಡಿಗೆಗೆ ಲಭ್ಯ ಆಗುವಂತೆ ಮಾಡಿ, ಕಲಾವಿದರಿಗೆ ಪ್ರದರ್ಶನ ಮಾಡಲು ಉಚಿತ ವೇದಿಕೆಯನ್ನು ಕಲ್ಪಿಸುವ ಅಗತ್ಯವಿದೆ. ರಂಗಭೂಮಿಯಲ್ಲಿ ತೊಡಗಿಸಿಕೊಂಡ ಎಲ್ಲ ರಂಗಕರ್ಮಿಗಳಿಗೆ ಸರ್ಕಾರದ ಯೋಜನೆಗಳು, ಸೌಲಭ್ಯಗಳು ದೊರಕುವಂತೆ ಜಿಲ್ಲಾಡಳಿತ ಕ್ರಮ ಜರೂಗಿಸಬೇಕು. ರಂಗಭೂಮಿಯ ಪರಿಕರಗಳನ್ನು ಒದಗಿಸುವ ಯೋಜನೆಯನ್ನು ಜಾರಿಗೆ ತರಬೇಕು. ಜನರನ್ನು ಆಕರ್ಷಿಸಿದ ಬಣ್ಣ ಬಣ್ಣದ ಸಿನಿಮಾ ಜಗತ್ತಿಗೆ ಸರಿಸಮಾನಾಗಿ ತಂತ್ರಗಳನ್ನು ಬಳಸಲಾಗದಿದ್ದರೂ, ತಾಂತ್ರಿಕತೆಯ ಲೇಪನದ ಅಗತ್ಯವಿದೆ. ರಂಗಭೂಮಿ ಉಳಿಸಿ–ಬೆಳೆಸಲು ಪ್ರೋತ್ಸಾಹ ನೀಡುವುದು. ರಂಗಭೂಮಿ–ರಂಗಕಲಾವಿದರ ಜ್ವಲಂತ ಸಮಸ್ಯೆ ಪರಿಹಾರ ದೊರಕಿಸುವುದು. ಹೊಸ ಹೊಸ ತಂತ್ರಜ್ಞಾನದ ಅಳವಡಿಕೆ ಮುಂದಾಗಬೇಕು.

ಉತ್ತರ ಕರ್ನಾಟಕ ಪ್ರದೇಶದಲ್ಲಿ ರಂಗಭೂಮಿ ಕಲೆ ಶ್ರೀಮಂತವಾಗಿದ್ದರೂ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಹಲವು ಸ್ಥಿತ್ಯಂತರಗಳನ್ನು ಎದುರಿಸುತ್ತಿದೆ. ಹಿಂದುಳಿದ ಈ ಪ್ರದೇಶದಲ್ಲಿ ದಿನ ಕಳೆದಂತೆ ರಂಗಕಲೆ ಮರೆಯಾಗುತ್ತಿದೆ. ಯುವಜನಾಂಗಕ್ಕೆ ಕಾಳಜಿ, ಉತ್ಸಾಹ ತುಂಬಿದರೆ ಮಾತ್ರ ರಂಗಭೂಮಿಯನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ಯಲು ಸಾಧ್ಯವಾಗುತ್ತದೆ.

ವಾಸ್ತವ ಸತ್ಯ ಸಂಗತಿಗಳನ್ನು ದೃಶ್ಯಗಳ ಮೂಲಕ ಮನೋಜ್ಞವಾಗಿ ಬಿತ್ತರಿಸುವ ರಂಗ ಕಲೆ, ನಾಟಕ ಪ್ರದರ್ಶನದ ಮೂಲಕ ಜನಸಾಮಾನ್ಯರನ್ನು ಜಾಗೃತಗೊಳಿಸುತ್ತಿದೆ. ಹಲವಾರು ಪ್ರದರ್ಶಕ ಕಲೆಗಳ ಸಂಯೋಜನೆಗಳಿಂದ ಸಾಂಸ್ಕೃತಿಕ ಸಮಾಜವನ್ನು ನಿರ್ಮಿಸುವಲ್ಲಿ ರಂಗ ನಾಟಕಗಳ ಕೊಡುಗೆ ಅಪಾರವಾಗಿದೆ. ರಂಗ ಪರಿಕರ ಬಳಕೆ, ದೈಹಿಕ ಮತ್ತು ಮಾನಸಿಕ ಸಿದ್ಧತೆಯೊಂದಿಗೆ ವಿವಿಧ ತಂತ್ರಗಳನ್ನು

ಬಳಸಿಕೊಂಡು ಪ್ರೇಕ್ಷಕರನ್ನು ಮೂಕಸ್ಮಿತಗೊಳಿಸಿ ಪ್ರದರ್ಶನ ನೀಡುವ ಉತ್ತರ ಕರ್ನಾಟಕದ ರಂಗ ತಂಡಗಳ ಪ್ರಯೋಗ ನಿಜಕ್ಕೂ ಜನ ಮೆಚ್ಚುಗೆ ಜೊತೆಗೆ ಸಮಾಜದ ಪ್ರಶಂಸೆಗೆ ಪಾತ್ರವಾಗಿರುವುದು ರಂಗಭೂಮಿಯ ಪ್ರಭಾವ ಮತ್ತು ಮಹತ್ವವನ್ನು ಒತ್ತಿ ಹೇಳುತ್ತವೆ.

ಒಂದು ನಾಟಕ ಚರ್ಚೆ, ವಾಗ್ವಾದವನ್ನು ಹುಟ್ಟು ಹಾಕುತ್ತದೆ. ಅನಕ್ಷರಸ್ಥರು ಕೂಡ ಸಮಾಜದ ಆಗುಹೋಗುಗಳಿಗೆ ಸ್ಪಂದಿಸುವುದು ಸಾಧ್ಯವಾಗುತ್ತದೆ. ಜಾತೀಕರಣ, ನಾಗರೀಕರಣ, ಉಳ್ಳವರ ದೌರ್ಜನ್ಯ ಹೀಗೆ ಸಮಾಜದ ಎಲ್ಲ ಮುಖಗಳನ್ನು ಜನರಿಗೆ ಪರಿಚಯಿಸುತ್ತದೆ. ಒಬ್ಬ ರಾಜಕಾರಣಿ ಮಾತನಾಡಿದರೆ, ಉದ್ಯಮಿ ಮಾತನಾಡಿದರೆ ಅದು ನಾಟಕ ಅನ್ನಿಸಬಹುದು. ಆದರೆ, ನಾಟಕ ಮಾಡಿದಾಗ ನೋಡುವವರು ಅಲ್ಲಿ ವಾಸ್ತವವನ್ನು ಕಾಣುತ್ತಾರೆ. ರಂಗಭೂಮಿ ಬೇರೆ ಬೇರೆ ಸಂಸ್ಕೃತಿಗಳನ್ನು ಪರಿಚಯಿಸುತ್ತದೆ. ಶೇಕ್ಸ್‌ಪಿಯರ್ ನಾಟಕ ವಿಕ್ಟೋರಿಯನ್ ಕಾಲಘಟ್ಟವನ್ನು ನಮಗೆ ಪರಿಚಯಿಸಬಹುದು. ಅಂದಿನ ಸಮಾಜದ ದರ್ಶನವನ್ನು ಮಾಡಿಸುತ್ತದೆ. ಹೀಗೆ ರಂಗಭೂಮಿ ಇಂದು ವ್ಯಕ್ತಿತ್ವ ವಿಕಸನ ಮತ್ತು ಸಮಾಜದ ವಿವಿಧ ಆಯಾಮಗಳ ಪರಿಚಯಕ್ಕೆ ಪೂರಕವಾಗಿದೆ.

ವಚನ ಪರಂಪರೆಯು ಸಂಕ್ರಾಂತಿ (ಲಂಕೇಶ್), ಮಹಾಚೈತ್ರ (ಶಿವಪ್ರಕಾಶ), ಕುಸುಮ ಬಾಲೆಯಲ್ಲಿ (ದೇವನೂರು ಮಹಾದೇವ) ಕಾಣಿಸಿದೆ. ಜಾನಪದ ಪರಂಪರೆಯು ಬೇಂದ್ರೆಯವರ ಕಾವ್ಯ ಮತ್ತು ಕಂಬಾರರ ಕಾವ್ಯದಲ್ಲಿ ಕಾಣಿಸಿದೆ ಎಂಬ ಚರ್ಚೆಗಳು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ನಡೆಯುತ್ತಿವೆ. ಶಾಂತರಸ, ಜಯತೀರ್ಥ ರಾಜಪುರೋಹಿತ, ಗೀತಾ ನಾಗಭೂಷಣ, ಚಂದ್ರಕಾಂತ ಕುಸನೂರ, ವೀರೇಂದ್ರ ಸಿಂಪಿ, ಜಂಬಣ್ಣ ಅಮರಚಿಂತ, ಶಿವಶರಣ ಜಾವಳಿ, ಶೈಲಜಾ ಉಡಚಣ ಮುಂತಾದವರು ಆಧುನಿಕ ಸಾಹಿತ್ಯವನ್ನು ಆಧುನಿಕ ಪ್ರಕಾರಗಳಲ್ಲಿ ರಚಿಸಿರುವುದು ಉಚಿತವೆನಿಸುತ್ತದೆ. ಈ ದೃಷ್ಟಿಯಿಂದ ಆಧುನಿಕ ಸಾಹಿತ್ಯವು ಅನೇಕ ಸಾಂಸ್ಕೃತಿಕ ತೊಡಕುಗಳ ನಡುವೆಯೂ ನಿಧಾನವಾಗಿ ಹೆಜ್ಜೆಯಿಡುತ್ತಾ ಬರುತ್ತಿದೆ.

ರಂಗಭೂಮಿಯ ವಿನ್ಯಾಸ ಸ್ಪಷ್ಟವಾಗಿ ಪ್ರಾಥಮಿಕ ವಿಷಯವಾಗಿದ್ದರೂ, ಆಕಾರ ವೇದಿಕೆ ಮತ್ತು ಸಭಾಂಗಣವು ಬಹುಶಃ ನಾಟಕದ ಪಠ್ಯದ ಮೇಲೆ ಅಳೆಯಬಹುದಾದ ಮತ್ತು ಪರೀಕ್ಷಿಸಬಹುದಾದ ಅತ್ಯುತ್ತಮ ಏಕ ನಿಯಂತ್ರಣವನ್ನು ನೀಡುತ್ತದೆ. ಇದಲ್ಲದೆ, ಪ್ಲೇಹೌಸ್ ವಾಸ್ತುಶೈಲಿಯು ನಾಟಕದ ಶೈಲಿ, ಅದರ ಸಂಪ್ರದಾಯಗಳನ್ನು ಯಾವುದೇ ಇತರ ಅಂಶಗಳಿಗಿಂತ ಹೆಚ್ಚಿನದನ್ನು ನಿರ್ದೇಶಿಸುತ್ತದೆ ಎಂದು ವಾದಿಸಬಹುದು.

ರಂಗಭೂಮಿ ಸಮಾಜದ ಎಲ್ಲ ವರ್ಗದವರ ಆತ್ಮವಿಶ್ವಾಸವನ್ನು ಗಳಿಸುವುದಕ್ಕೆ ಉತ್ತಮ ಫ್ಲ್ಯಾಟ್‌ಫಾರಂ ಆಗಿದೆ. ಮಕ್ಕಳಲ್ಲಿ ಮತ್ತು ಯುವ ಜನಾಂಗದವರಲ್ಲಿ ಸಂಕುಚಿತ ಮನೋಭಾವವನ್ನು ತೊಡೆದುಹಾಕುತ್ತದೆ. ಅವರನ್ನು ಸಮಾಜಮುಖಿಯನ್ನಾಗಿರುವಂತೆ ಪ್ರೇರೇಪಿಸುತ್ತದೆ. ಸಮಾಜದಲ್ಲಿ ರಂಗ

ಚಳುವಳಿ ಮೂಲಕ ಪರಿವರ್ತನೆಯನ್ನು ತರಬಹುದು. ಯುವ ಜನತೆಯಲ್ಲಿ ಸುಪ್ತ ಪ್ರತಿಭೆಯನ್ನು ಹೊರಹಾಕಲು ಸಹಾಯ ಮಾಡುತ್ತದೆ. ಯುವ ಜನತೆಯ ಉತ್ಕಟತೆಗೆ ಸೂಕ್ತ ವೇದಿಕೆ ಆಗಬಲ್ಲದಾಗಿದೆ.

ರಂಗಭೂಮಿ ಚಟುವಟಿಕೆಗಳು ಕ್ರಿಯಾಶೀಲವಾಗಿವೆ. ಇದಕ್ಕೆ ಸಾಮಾಜಿಕ ಸಮಸ್ಯೆಗಳು ಕಥಾವಸ್ತುಗಳಾಗಿವೆ. ಮತ್ತು ಅವುಗಳಿಗೆ ಪರಿಹಾರವನ್ನು ರಂಗವೇದಿಕೆ ಕಲ್ಪಿಸಿವೆ. ಆದ್ದರಿಂದ ಈ ವಿಷಯ ಅಧ್ಯಯನಕ್ಕೆ ಅತ್ಯಂತ ಮಹತ್ವಪೂರ್ಣ ಎನಿಸಿದೆ. ದೇವದಾಸಿ ವಿಮೋಚನಾ ಹೋರಾಟ, ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ, ಅಸ್ಪೃಷ್ಯತೆ ನಿವಾರಣೆ, ಸಮಾಜದ ಅವ್ಯವಸ್ಥೆ, ಅನೀತಿ, ಅಧರ್ಮ, ಅಸಹಿಷ್ಣುತೆ, ದ್ವೇಷ ಮನೋಭಾವ, ಪರಸ್ಪರ ಸಂಘರ್ಷ ಮನಸ್ಥಿತಿಯನ್ನು ಸರಿಪಡಿಸಲು ಜನ ಜಾಗೃತಿ ಜಾಥಾ, ಕಾರ್ಯಾಗಾರ, ವಿಚಾರ ಸಂಕಿರಣ, ಸಮ್ಮೇಳನ, ಮುಕ್ತ ಚರ್ಚೆ ಮತ್ತು ಸಂವಾದ ಮಾಡುತ್ತಾ ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಇಲ್ಲಿನ ರಂಗಕರ್ಮಿಗಳು, ರಂಗ ತಂಡಗಳು ಹಾಗೂ ಕಲಾವಿದರು ಕಾಲ ಕಾಲಕ್ಕೆ ಅನುಗುಣವಾದ ಸಮಸ್ಯೆ ಆಧಾರಿತ ನಾಟಕ ಪ್ರದರ್ಶನಗಳಿಂದ ಸಾಕಷ್ಟು ಸುಧಾರಿಸಿವೆ. ಉತ್ತರ ಕರ್ನಾಟಕದ ಸಾಮಾಜಿಕ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಜನರಿಗೆ ತಿಳಿಸುವ ಕೆಲಸವನ್ನು ಸಹ ರಂಗಭೂಮಿ ಮಾಡುತ್ತಿದೆ. ಆದರಿಂದ ರಂಗಭೂಮಿಯ ಪ್ರಸ್ತುತತೆ ಎಷ್ಟು ಮುಖ್ಯವೋ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳ ಸಾಮಾಜಿಕ ಸಮಸ್ಯೆಗಳ ಜಾಗೃತವಾಗಿ ಕಾರ್ಯನಿರ್ವಹಿಸುತ್ತಿರುವ ರಂಗಭೂಮಿಯ ಕೊಡುಗೆ ಅಪಾರವಾಗಿದೆ.

**ಪರಾಮರ್ಶನ ಗ್ರಂಥಗಳು**

1. ಆಚಾರ್. ಕೆ. ವಿ. – ಕರ್ನಾಟಕ ರಂಗಭೂಮಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1976.
2. ಎನ್ಕೆ – ಉತ್ತರ ಕರ್ನಾಟಕ ರಂಗಭೂಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ, ಭಾರತ. 2001.
3. ಸೂರ್ಯನಾಥ ಕಾಮತ್ – ಕನ್ನಡ ರಂಗಭೂಮಿ ಮತ್ತು ಸ್ವಾತಂತ್ರ್ಯ ಚಳುವಳಿ, ರಾಘವೇಂದ್ರ ಪ್ರಕಾಶನ, ಬೆಂಗಳೂರು. 1968.
4. ಹಾ. ಮಾ. ನಾಯಕ್ – ಕನ್ನಡ ಗ್ರಂಥಸೂಚಿ ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1979.
5. ಆದ್ಯ ರಂಗಾಚಾರ್ಯ – ಕನ್ನಡ ರಂಗಭೂಮಿಯ ಪುರೋಭಿವೃದ್ಧಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1968.
6. ಅಕ್ಷರ ಕೆ. ವಿ. – ರಂಗ ಪ್ರಪಂಚ, ಅಕ್ಷರ ಪ್ರಕಾಶನ, ಸಾಗರ, ಕರ್ನಾಟಕ. 1994.

7. ಮೋಹನ್, ಜಿ. ಎನ್. – ಸಮೂಹದಿಂದ ಸಮೂಹಕ್ಕೆ ಬೀದಿ ನಾಟಕ, ಪ್ರಯೋಗ ರಂಗ ಪ್ರಕಾಶನ, ಬೆಂಗಳೂರು, ಕರ್ನಾಟಕ. 1990.

8. ದಸ್ತಗೀರಸಾಬ್ – ಹೈದ್ರಾಬಾದ – ಕರ್ನಾಟಕದ ಬೀದಿ ನಾಟಕಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಕರ್ನಾಟಕ. 2005.

9. ಡಾ. ಎಚ್. ಕೆ. ರಂಗನಾಥ್ – ಕರ್ನಾಟಕ ರಂಗಭೂಮಿ, ಪ್ರಕಾಶಕರು, ಹೇಮಂತ ಸಾಹಿತ್ಯ, ಬೆಂಗಳೂರು, 1978, 2000, 2011.

10. ಡಾ. ಬಸವರಾಜ ಮಲಶೆಟ್ಟಿ – ಕರ್ನಾಟಕದ ಜಾನಪದ ರಂಗಭೂಮಿ, ಸ್ನೇಹ ಪ್ರಿಂಟರ್ಸ್, ಅತ್ತಿಗುಪ್ಪೆ, ವಿಜಯನಗರ, ಬೆಂಗಳೂರು, 2008.

11. ಅಕ್ಷರ ಕೆ. ವಿ. – ರಂಗ ಪ್ರಯೋಗ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 1999.

12. ಡಾ. ಕಾ. ವೆಂ. ಶ್ರೀನಿವಾಸಮೂರ್ತಿ – ಕನ್ನಡ ರಂಗಭೂಮಿ, ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಬೆಂಗಳೂರು, 2005.

13. ಡಾ. ಜೆ. ಎ. ಹಡಗಲಿ – ಕನ್ನಡ ಹವ್ಯಾಸಿ ರಂಗಭೂಮಿ ಒಂದು ಅಧ್ಯಯನ, ಚಂದ್ರನಾಥ ಪ್ರಕಾಶನ, ಧಾರವಾಡ, 2009

14. ಬಿ. ವಿ. ವೈಕುಂಠರಾಜು – ಕನ್ನಡ ರಂಗಭೂಮಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

15. ಸಂ. ಡಾ. ಬಿ. ವಿ. ರಾಜಾರಾಂ – ಮಕ್ಕಳ ರಂಗಭೂಮಿ – ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು – 2011.

16. ಕೆ. ವಿ. ಚಂದ್ರಣ್ಣ ಗೌಡ – ರಂಗಭೂಮಿ ಮತ್ತು ಜನ ಜಾಗೃತಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–1997.

17. ಕೆ. ವಿ. ಸುಬ್ಬಣ್ಣ – ರಂಗಭೂಮಿ ಮತ್ತು ಸಮುದಾಯ, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ದಕ್ಷಿಣ ಕನ್ನಡ, 2000.

18. ಡಾ. ಶ್ರೀರಂಗ – ಕನ್ನಡ ರಂಗಭೂಮಿ ನಡೆದು ಬಂದ ದಾರಿ (ಸಂ) – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1987.

19. ಡಾ. ನಾ. ದಾಮೋದರ ಶೆಟ್ಟಿ – ರಂಗಶೋಧನ, ಭಾರತ ಯಾತ್ರಾ ಕೇಂದ್ರ, ಬೆಂಗಳೂರು 1998.